**ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಚಿಂಚೋಳಿ**

***ಸಿ.ಸಿ.ನಂ.298/2018***

**ಫಿರ್ಯಾಧಿದಾರಃ** ಕರ್ನಾಟಕ ಸರ್ಕಾರದ ಪರವಾಗಿ ಸುಲೇಪೇಟ್ ಪೋಲೀಸ್ ಠಾಣೆ

// **ವಿರುದ್ದ** //

**ಆರೋಪಿತರು :** ರವಿಕುಮಾರ ಮತ್ತು ಇತರರು

## :ದೋ ಷಾ ರೋ ಪ ಣೆ:

ನಾನು ಶ್ರೀ **ದತ್ತಕುಮಾರ ಜವಳಕರ. B.B.A. L.L.B (Hons) L.L.M.** ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಚಿಂಚೋಳಿ, ಈ ಕೆಳಕೆಂಡ ಆರೋಪಿತರು.

| | |
|---|---|
| 3. | ಶ್ರೀಕಾಂತ ತಂದೆ ಶಿವರಾಯ ಕುಡ್ಡಳ್ಳಿ , ವಃ 26 ವರ್ಷ, ಉಃ ಚಾಲಕ, |
| 5. | ಸುಮಿತ್ರಾ ಗಂಡ ಶಿವರಾಯ ಕುಡ್ಡಳ್ಳಿ , ವಃ 45 ವರ್ಷ, ಉಃ ಕೂಲಿ,<br>ಇಬ್ಬರ ವಾಸಃ ಕುರುಕುಂಟಾ, ತಾಃ ಸೇಡಂ. |

ಆದ ನಿಮ್ಮ ವಿರುದ್ದ ದೋಷಿಸುವ ದೋಷಾರೋಪಣೆ ಎನೆಂದರೆ,

ಮೊದಲನೆಯದಾಗಿ ದಿನಾಂಕಃ 11.01.2018 ರಂದು ಸಾಯಂಕಾಲ 05.00 ಗಂಟೆಯ ಸುಲೇಪೇಟ್ ಪೋಲಿಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಸುಲೇಪೇಟ್ ಗ್ರಾಮದಲ್ಲಿ ಚಾಸಾ-1 ಶ್ರೀಮತಿ ಸವಿತಾ ರವರು ತನ್ನ ಮನೆಯ ಅಂಗಳದಲ್ಲಿರುವಾಗ 1ನೇ ಆರೋಪಿಯಾದ ನೀನು ಚಾಸಾ-1ರವರ ಮನೆಯ ಮುಂದೆ ಇರುವ ಸಿಸಿ ರಸ್ತೆಯ ಮೇಲೆ ನಿಂತುಕೊಂಡು ರಾತ್ರಿ ನನ್ನ ಜೊತೆ ಮಲಗು ನಿನಗೆ ಬೇಕಾದಷ್ಟು ದುಡ್ಡು ಕೊಡುತ್ತೇನೆ ಅಂತಾ ಅಂದಿದ್ದ, ಕಾರಣ, ಭಾ.ದಂ.ಸಂ.ಕಲಂ. 354(ಎ)(iii) ಸಹವಾಚಕ ಕಲಂ 34ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನೆಸಗಿರುತ್ತೀರಿ ಎಂದು ಅಪಾದಿಸಿದೆ.

2. ಎರಡನೆಯದಾಗಿ ಈ ಮೇಲೆ ಹೇಳಿದ ಸ್ದಳ, ಸಮಯ ಹಾಗೂ ದಿನಾಂಕದಂದು 1ನೇ ಆರೋಪಿತನಾದ ನೀನು ಸಮಾನ ಉದ್ದೇಶದಿಂದ ಚಾಸಾ-1 ರವರಿಗೆ ಚಪ್ಪಲಿ ನೋಡಿದೆಯಾ ಅಂತಾ ಜೋರಾದ ಧ್ವನಿಯಲ್ಲಿ ಬಂದಿದ್ದು, 2ನೇ ಆರೋಪಿಯಾದ ನೀನು ಅವಮಾನ ಮಾಡುವ ಉದ್ದೇಶದಿಂದ ಚಪ್ಪಲಿ ತೆಗೆದುಕೊಂಡು ಬಂದು ಚಾಸಾ-1 ರವರಿಗೆ ಮನ ಬಂದಂತೆ ಮೈಮೇಲೆ ಹೊಡೆದಿದ್ದ ಕಾರಣ, ಭಾ.ದಂ.ಸಂ.ಕಲಂ. 355 ಸಹವಾಚಕ ಕಲಂ 34ರ ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನೆಸಗಿರುತ್ತೀರಿ ಎಂದು ಅಪಾದಿಸಿದೆ.

3. ಮೂರನೆಯದಾಗಿ ಈ ಮೇಲೆ ಹೇಳಿದ ಸ್ದಳ, ಸಮಯ ಹಾಗೂ ದಿನಾಂಕದಂದು 1ನೇ ಆರೋಪಿತನಾದ ನೀನು ಸಮಾನ ಉದ್ದೇಶದಿಂದ ಚಾಸಾ-1 ರವರಿಗೆ ರಂಡಿ ನನಗೆ ಚಪ್ಪಲಿ ತೋರಿಸ್ತಿಯಾ ಅಂತಾ ಅವಾಚ್ಯ ಶಬ್ದದಿಂದ ಬೈದಿದ ಕಾರಣ, ಭಾ.ದಂ.ಸಂ.ಕಲಂ. 504 ಸಹವಾಚಕ ಕಲಂ 34ರ ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನೆಸಗಿರುತ್ತೀರಿ ಎಂದು ಅಪಾದಿಸಿದೆ.

4. ನಾಲ್ಕನೆಯದಾಗಿ ಈ ಮೇಲೆ ಹೇಳಿದ ಸ್ದಳ, ಸಮಯ ಹಾಗೂ ದಿನಾಂಕದಂದು 1ನೇ ಆರೋಪಿತನಾದ ನೀನು ಸಮಾನ ಉದ್ದೇಶದಿಂದ ಚಾಸಾ-1 ರವರಿಗೆ ಕೈಯಿಂದ ಮೈಮೇಲೆ ಹೊಡೆದಿದ್ದು ಕಾರಣ, ಭಾ.ದಂ.ಸಂ.ಕಲಂ. 323 ಸಹವಾಚಕ ಕಲಂ 34ರ ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನೆಸಗಿರುತ್ತೀರಿ ಎಂದು ಅಪಾದಿಸಿದೆ.

ಮತ್ತು ಸದರಿ ಅಪರಾಧಗಳ ವಿಚಾರಣೆಯ ಈ ನ್ಯಾಯಾಲಯದಲ್ಲಿ ನಡೆಯುಂತೆ ನಿಶದೆಶಿಸುತ್ತೇನೆ.

ಪ್ರಶ್ನೆ-1 ಮೇಲೆ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತೆ?

ಉತ್ತರ 3

5

ಪ್ರಶ್ನೆ-2 ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಎದುರಿಸವಿರೊ?
ಉತ್ತರ 3

5

ದಿನಾಂಕ: 14.05.2023.
ಸ್ಥಳ : ಚಿಂಚೋಳಿ

(ಶ್ರೀ ದತ್ತಕುಮಾರ ಜವಳಕರ)
ಹೆಚ್ಚುವರಿ ಪ್ರ.ದ.ನ್ಯಾ.ದಂಡಾಧಿಕಾರಿ, ಚಿಂಚೋಳಿ.